## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\153\2017\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 31/10/2017

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಮುಳಬಾಗಿಲು 1) ಆವನಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಾಗಿದ್ದ ಡಾ॥ಕೆ.ವಿ.ಶ್ರೀಧರ್, 2) ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ.ಸಂಜಪ್ಪ, 3) ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ.ವೆಂಕಟರೆಡ್ಡಿ, 4) ಖಜಾನಾಧಿಕಾರಿಯಾಗಿದ್ದ ಶ್ರೀ.ವಿ.ಮುನಿವೆಂಕಟಪ್ಪ (ಪ್ರಸ್ತುತ ನಿವೃತ್ತ), 5) ತಾಲ್ಲೂಕ್ ಆರೋಗ್ಯಾಧಿಕಾರಿ ಕಛೇರಿಯ ದ್ವಿತೀಯ ದರ್ಜೆ ಸಹಾಯಕರಾಗಿದ್ದ ಶ್ರೀ.ಉಮಾಶಂಕರ್, 6) ಕನ್ನಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರದ ಫಾರ್ಮಸಿಸ್ಟ್ ಶ್ರೀ.ಎಸ್.ಹೆಚ್.ತಿಮ್ಮರಾಜು, 7) ಬಂಗಾರಪೇಟೆ ಸಾರ್ವಜನಿಕ ಆಸ್ಪತ್ರೆಯ ದ್ವಿತೀಯ ದರ್ಜೆ ಸಹಾಯಕರಾಗಿದ್ದ ಶ್ರೀ.ಈ.ಶಂಕರಪ್ಪ (ಪ್ರಸ್ತುತ ನಿವೃತ್ತ) ಮತ್ತು 8) ಮುಳಬಾಗಿಲು ಸಾರ್ವಜನಿಕ ಆಸ್ಪತ್ರೆಯ ದ್ವಿತೀಯ ದರ್ಜೆ ಸಹಾಯಕರಾಗಿದ್ದ ಶ್ರೀ.ಮೊಹಮ್ಮದ್ ಇನಾಯಿತುಲ್ಲಾ (ಪ್ರಸ್ತುತ ನಿವೃತ್ತ) ರವರು ಕರ್ತವ್ಯ ಲೋಪ/ ದುರ್ವರ್ತನೆ ಎಸಗಿರುವ ಬಗ್ಗೆ.

*******

ಮಾನ್ಯ ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕೋಲಾರ ಲೋಕಾಯುಕ್ತ ಪೋಲೀಸ್ ನಿರೀಕ್ಷಕರ (ಇನ್ನು ಮುಂದೆ "ತನಿಖಾಧಿಕಾರಿ" ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ವಯ ಕೋಲಾರ ಜಿಲ್ಲೆ ಮುಳಬಾಗಿಲು 1) ಆವನಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಾಗಿದ್ದ ಡಾ॥ಕೆ.ವಿ.ಶ್ರೀಧರ್, 2) ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ.ಸಂಜಪ್ಪ, 3) ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ.ವೆಂಕಟರೆಡ್ಡಿ, 4) ಖಜಾನಾಧಿಕಾರಿಯಾಗಿದ್ದ

ಶ್ರೀ.ವಿ.ಮುನಿವೆಂಕಟಪ್ಪ (ಪ್ರಸ್ತುತ ನಿವೃತ್ತ), 5) ತಾಲ್ಲೂಕ್ ಆರೋಗ್ಯಾಧಿಕಾರಿ ಕಛೇರಿಯ ದ್ವಿತೀಯ ದ. ಸಹಾಯಕರಾಗಿದ್ದ ಶ್ರೀ.ಉಮಾಶಂಕರ್, 6) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಗುಮಾಸ್ತರಾಗಿದ್ದ ಶ್ರೀ.ಹರಿನಾಥ್ (ಪ್ರಸ್ತುತ ವಜಾಗೊಂಡಿದ್ದಾರೆ), 7) ಚಿಂತಾಮಣಿ ತಾಲ್ಲೂಕ್ ಮಲ್ಲಪಳ್ಳಿ ವೇದಾ ಸೌಹಾರ್ಧ ಸಹಕಾರ ನಿಯಮಿತ ಅಧ್ಯಕ್ಷರಾಗಿದ್ದ ಶ್ರೀ.ವೇಣುಗೋಪಾಲ ರೆಡ್ಡಿ, 8) ಕನ್ನಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರದ ಫಾರ್ಮಸಿಸ್ಟ್ ಶ್ರೀ.ಎಸ್.ಹೆಚ್.ತಿಮ್ಮರಾಜು, 9) ಬಂಗಾರಪೇಟೆ ಸಾರ್ವಜನಿಕ ಆಸ್ಪತ್ರೆಯ ದ್ವಿತೀಯ ದರ್ಜೆ ಸಹಾಯಕರಾಗಿದ್ದ ಶ್ರೀ.ಈ.ಶಂಕರಪ್ಪ (ಪ್ರಸ್ತುತ ನಿವೃತ್ತ) ಮತ್ತು 10) ಮುಳಬಾಗಿಲು ಸಾರ್ವಜನಿಕ ಆಸ್ಪತ್ರೆಯ ದ್ವಿತೀಯ ದರ್ಜೆ ಸಹಾಯಕರಾಗಿದ್ದ ಶ್ರೀ.ಮೊಹಮ್ಮದ್ ಇನಾಯಿತುಲ್ಲಾ (ಪ್ರಸ್ತುತ ನಿವೃತ್ತ) (ಇನ್ನು ಮುಂದೆ "1 ರಿಂದ 10ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರುಗಳು ಸರ್ಕಾರಿ ನೌಕರರಾಗಿ ತಮ್ಮ ಕೆಲಸದಲ್ಲಿ ದುರ್ವರ್ತನೆ/ ದುರ್ನಡತೆ ತೋರಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಾಗ, ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಅ) ತನಿಖಾಧಿಕಾರಿಗಳು ಸಲ್ಲಿಸಿದ ವರದಿಯನ್ವಯ 1 ರಿಂದ 10ನೇ ಎದುರುದಾರರು ಒಟ್ಟಾಗಿ ಷಾಮೀಲಾಗಿ, ದಿನಾಂಕ:01/01/2009 ರಿಂದ 31/03/2011ರವರೆಗಿನ ಅವಧಿಯಲ್ಲಿ ಮುಳಬಾಗಿಲು ತಾಲ್ಲೂಕಿನ ವಿವಿಧ ಆರೋಗ್ಯ ಕೇಂದ್ರಗಳಿಗೆ ಪೀಠೋಪಕರಣ ಹಾಗೂ ಇತರೆ ವಸ್ತುಗಳನ್ನು ಖರೀದಿಸುವ ನೆಪದಲ್ಲಿ ಅಪರಾಧಕ್ಕೆ ಒಳಸಂಚನ್ನು ನಡೆಸಿ ಯಾವುದೇ ಪೀಠೋಪಕರಣ ಹಾಗೂ ಇತರೆ ವಸ್ತುಗಳನ್ನು ಖರೀದಿಸದೇ, ನಕಲಿ ಬಿಲ್‌ಗಳನ್ನು ಸೃಷ್ಟಿಸಿ, ಖಜಾನೆ ಮುಖಾಂತರ ಚೆಕ್‌ಗಳನ್ನು ತೆಗೆದಿದ್ದಾರೆ;

ಆ) ಅಲ್ಲದೇ, ಸದರಿ ಚೆಕ್‌ಗಳ ಮೇಲಿನ ಮೂಲ ಪಾವತಿದಾರರ ಹೆಸರುಗಳನ್ನು ತಿದ್ದಿ, ಶ್ರೀ ಸತ್ಯನಾರಾಯಣ ವೆಂಕಟೇಶ್ವರ ಎಲೆಕ್ಟ್ರಿಕಲ್, ಬೆಸ್ತರಹಳ್ಳಿ ರವರ ಹೆಸರನ್ನು ಬರೆದು, ಕೋಲಾರ ಜಿಲ್ಲಾ ಸಹಕಾರಿ ಬ್ಯಾಂಕ್, ಮುಳಬಾಗಿಲು ಶಾಖೆ, ವೇದ ಸೌಹಾರ್ದ ಸಹಕಾರ ನಿಯಮಿತ, ಮಾಳಪಲ್ಲಿ, ಚಿಂತಾಮಣಿ ಹಾಗೂ 1ನೇ ಎದುರುದಾರರ ಖಾತೆಯಲ್ಲಿ ಸುಮಾರು ₹28,38,426/-ಗಳನ್ನು ನಗಧೀಕರಿಸಿ, ತಮ್ಮ ಕಾನೂನು ಬದ್ಧ ಅಧಿಕಾರ ಉಪಯೋಗಿಸಿ, ಹಣ ದುರುಪಯೋಗಪಡಿಸಿರುವುದು ತನಿಖೆಯಿಂದ ಸಾಭೀತಾಗಿದೆ;

ಇ) ತನಿಖಾ ಸಮಯದಲ್ಲಿ ಪಡೆದ ದಾಖಲೆಗಳ ಅನ್ವಯ ತನಿಖಾಧಿಕಾರಿಗಳು ಕೋಲಾರ ಲೋಕಾಯುಕ್ತ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:7/2013 ಕಲಂ 7, 13(1)(ಸಿ) ಸಹ ಕಲಂ 13(2) ಪಿಸಿ ಕಾಯಿದೆ, 1988 ಮತ್ತು ಐಪಿಸಿ ಕಲಂ 120(ಬಿ), 409, 465, 468, 471, 420 ರಡಿ ಪ್ರಕರಣ ದಾಖಲಿಸಿದ್ದಾರೆ;

ಈ) ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರುಗಳು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ಎದುರುದಾರರು ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬಂದಿದೆ.

2. ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫರಾಸ್ಸು ಮಾಡಬಾರದೆನ್ನುವ ಬಗ್ಗೆ ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರುಗಳಿಗೆ ಕಳುಹಿಸಲಾಗಿ, ಎದುರುದಾರರುಗಳು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ಸಲ್ಲಿಸಿದ್ದಾರೆ. ಆದರೆ, ಎದುರುದಾರರುಗಳು ನೀಡಿರುವ ಉತ್ತರದಲ್ಲಿ, ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

3. ಆರನೇ (6ನೇ) ಎದುರುದಾರರು ಈಗಾಗಲೇ ಸೇವೆಯಿಂದ ವಜಾಗೊಂಡಿದ್ದು, 7ನೇ ಎದುರುದಾರರು ಸಹಕಾರ ನಿಯಮಿತದ ಅಧ್ಯಕ್ಷರಾಗಿದ್ದು, ಖಾಸಗಿ ವ್ಯಕ್ತಿಯಾಗಿರುವುದರಿಂದ, 6 ಮತ್ತು 7ನೇ ಎದುರುದಾರರ ವಿರುದ್ಧದ ನಡವಳಿಗಳನ್ನು ಕೈಬಿಡಲಾಗಿದೆ.

4. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 5 ಮತ್ತು 8 ರಿಂದ 10ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಅದಲ್ಲದೆ 1 ರಿಂದ 5 ಮತ್ತು 8 ರಿಂದ 10ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು

ಬರುವುದರಿಂದ, ಸದರಿಯವರುಗಳ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, 4, 9 ಮತ್ತು 10ನೇ ಎದುರುದಾರರು ದಿನಾಂಕ:31/12/2013, 30/04/2014 ಮತ್ತು 31/07/2015 ರಂದು ಕ್ರಮವಾಗಿ, ಈಗಾಗಲೇ ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್ಆರ್ ನಿಯಮ 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು** ನೀಡಿ ಹಾಗೂ 1 ರಿಂದ 5 ಮತ್ತು 8 ರಿಂದ 10ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

6. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 4, 9 ಮತ್ತು 10ನೇ ಎದುರುದಾರರು ದಿನಾಂಕ:31/12/2013, 30/04/2014 ಮತ್ತು 31/07/2015 ರಂದು ಕ್ರಮವಾಗಿ, ಈಗಾಗಲೇ ನಿವೃತ್ತಿ ಹೊಂದಿದ್ದಾರೆ.

3/11/17.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**